# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 183 | Pages. 2 | Date: 30-06-2026, TUESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 183 - ಪುಟಗಳು : 2 | 30-06-2026 ಮಂಗಳವಾರ | Ph: 8762954248 | ದರ : ₹1


# ಮೈತ್ರಿಗೆ ಕೆಟ್ಟ ಹೆಸರು ಬಾರದಂತೆ ಕೆಲಸ ಮಾಡಿ

## ನೀವು ನನ್ನ ಪರ ಪ್ರಚಾರಕ್ಕೆ ಬರಬೇಕಾಗಬಹುದು I ಶಾಸಕ ಹೆಚ್.ಪಿ.ಸ್ವರೂಪ್‌ಗೆ ಪ್ರೀತಂ ಟಾಂಗ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮುಂಬರುವ 2028ರ ವಿಧಾನಸಭೆ ಚುನಾವಣೆಗೆ ಎನ್‌ಡಿಎ ಅಭ್ಯರ್ಥಿಯಾಗಿ ಯಾರಿಗೆ ಟಿಕೆಟ್ ಸಿಕ್ಕರೂ ಇಬ್ಬರು ಒಟ್ಟಿಗೆ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಜನರಿಗೆ ಹತ್ತಿರವಾಗಿ ಕೆಲಸ ಮಾಡಿ ಎಂದು ಎಂದು ಮಾಜಿ ಶಾಸಕ ಪ್ರೀತಂ ಗೌಡ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಾಸಕ ಹೆಚ್.ಪಿ.ಸ್ವರೂಪ್ ನನ್ನ ಪರವಾಗಿ ಪ್ರಚಾರಕ್ಕೆ ಬರಬೇಕಾಗಬಹುದು. ಆದ್ದರಿಂದ ಎನ್‌ಡಿಎ ಕುರಿತು ಜನರಲ್ಲಿ ಅಸಹನೆ ಹುಟ್ಟದ ಹಾಗೆ ಕೆಲಸ ಮಾಡಿ ಎಂದು ಸಲಹೆ ನೀಡುತ್ತೇನೆ ಎಂದು ಪರೋಕ್ಷವಾಗಿ ತಾವೇ ಕ್ಷೇತ್ರದ ಅಭ್ಯರ್ಥಿ ಎಂದರು.

ರಾಜ್ಯದಲ್ಲಿ ಎನ್‌ಡಿಎ ಹೊಂದಾಣಿಕೆ ಇದೆ. ಮೈತ್ರಿ ಪಕ್ಷದ ಶಾಸಕರಾಗಿ ಅವರು ಕೆಲಸ ಮಾಡದಿದ್ದರೆ ಅದು ನನ್ನ ಮೇಲೆ ಪರಿಣಾಮ ಬೀರುತ್ತದೆ. ಮುಂದಿನ ಚುನಾವಣೆಯಲ್ಲಿ ಅವರಿಗೆ ಮತ್ತೆ ಸ್ಪರ್ಧೆ ಮಾಡಿ ಎನ್ನುವುದಿಲ್ಲ. 2028ಕ್ಕೆ ಅವರು ನನ್ನ ಪರ ಪ್ರಚಾರ ಮಾಡಬೇಕಾಗುತ್ತದೆ. ಕ್ಷೇತ್ರದ ಕೆಲಸಗಳು ಎನ್‌ಡಿಎ ಪರವಾಗಿ ಇರಬೇಕು ಎಂದರು.

ನಾನು ಬೆಂಗಳೂರಿನಲ್ಲಿ ಮನೆ ಮಾಡಿಕೊಂಡಿದ್ದೇನೆಂದು ಶಾಸಕರು ಹೇಳಿದ್ದಾರೆ. ಬಹುಶ: ಮಾಜಿ ಸಚಿವರಾದ ಹೆಚ್.ಡಿ.ರೇವಣ್ಣ, ಎ.ಮಂಜು. ಬೇಲೂರು ಶಾಸಕ ಹೆಚ್.ಕೆ.ಸುರೇಶ್ ಅವರಿಗೆ ಹೇಳಬೇಕಾಗಿರುವುದನ್ನು ನನಗೆ ಹೇಳಿದ್ದಾರೆ ಅನಿಸುತ್ತದೆ. ನಾನು ಶಾಸಕನಾದ ಮೇಲೆ ಬೆಂಗಳೂರಿನಲ್ಲಿ ಮನೆ ಮಾಡಿಲ್ಲ. ವೃತ್ತಿ, ಸಂಸಾರ, ಸಾಮಾಜಿಕ ಚಟುವಟಿಕೆ



ಇರುತ್ತದೆ. ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ರಾಜ್ಯಾದ್ಯಂತ ಪ್ರವಾಸ ಮಾಡುತ್ತೇನೆ. ನಾನು ಬೆಂಗಳೂರಿನಲ್ಲಿ ಇರುವುದರಿಂದ ಯಾವ ತೊಂದರೆಯೂ ಇಲ್ಲ. ಕ್ಷೇತ್ರದಲ್ಲಿ ಎಷ್ಟು ದಿನ ಇರುತ್ತೇನೆ ಎನ್ನುವುದಲ್ಲ ಜನರಿಗಾಗಿ ಏನು ಕೆಲಸ ಮಾಡುತ್ತೇನೆ ಎನ್ನುವುದು ಮುಖ್ಯವಾಗುತ್ತದೆ. ಬಿಸಿ ರಕ್ತದ ಯುವಕ ಮಾತನಾಡಿದ್ದಾರೆ ಮಾತನಾಡಲಿ ಎಂದು ತಿರುಗೇಟು ನೀಡಿದರು.

### ಪ್ರೀತಂ ಗೌಡರ ಆಳ-ಅಗಲ ಗೊತ್ತಿಲ್ಲ

ಮುಂಬರುವ ಚುನಾವಣೆಯಲ್ಲಿ ಅಭ್ಯರ್ಥಿ ಯಾರೆಂಬುದು ಇನ್ನೂ ತೀರ್ಮಾನವಾಗಿಲ್ಲ. ಸದ್ಯಕ್ಕೆ ನಾನು ಎನ್‌ಡಿಎ ಪ್ರಬಲ ಆಕಾಂಕ್ಷಿಯಾಗಿದ್ದೇನೆ. ವರಿಷ್ಠರು ಇಬ್ಬರನ್ನು ಬಿಟ್ಟು ಮೂರನೇಯವರಿಗೆ ಅವಕಾಶ ಕೊಟ್ಟರೆ ಕೆಲಸ ಮಾಡಬೇಕಾಗುತ್ತದೆ. ಅಭ್ಯರ್ಥಿ ಯಾರು ಎನ್ನುವುದಕ್ಕಿಂತ ಜನರ ಪ್ರೀತಿ ಗಳಿಸುವುದು ಮುಖ್ಯವಾಗುತ್ತದೆ. ಪ್ರೀತಂ ಗೌಡರ ಆಳ ಅಗಲ ಗೊತ್ತಿಲ್ಲದವರು ಏನೇನೋ ಮಾತನಾಡುತ್ತಾರೆ. ನನ್ನ ಶಕ್ತಿ ಏನೆಂಬುದು ಎಲ್ಲರಿಗೂ ಗೊತ್ತಿದೆ. 2023ರಲ್ಲಿ ನಾನು ಬೇಡವೆಂದು ಜನರು ತೀರ್ಮಾನಿಸಿದ್ದರಿಂದ ಸೋಲಬೇಕಾಯಿತು. 2028ರ ಟಿಕೆಟ್ ಸ್ವರೂಪ್ ಅವರಿಗೆ ಎಂದು ಯಾರೂ ಜೆಪಿಎ ಬರೆದುಕೊಟ್ಟಿಲ್ಲ. ಜೆಡಿಎಸ್‌ನಲ್ಲಿ ಗೆದ್ದ ಎಲ್ಲ ಶಾಸಕರಿಗೂ ಟಿಕೆಟ್ ಕೊಡುವುದಾದರೆ ಅವರಿಗೆ 18 ಕ್ಷೇತ್ರಗಳನ್ನು ಮಾತ್ರ ಬಿಟ್ಟುಕೊಡಬೇಕಾಗುತ್ತದೆ. ಆದರೆ 70 ರಿಂದ 80 ಗೆಲ್ಲುವ ಕ್ಷೇತ್ರಗಳು ಬೇಕೆಂದು ಕೇಳುತ್ತಿದ್ದಾರೆ. ಹಾಗಾದರೆ ಚನ್ನಪಟ್ಟಣ ಕ್ಷೇತ್ರದಲ್ಲಿ ಏನಾಯಿತು ಎಂದು ಪ್ರಶ್ನಿಸಿದರು. ಕಳೆದ ಚುನಾವಣೆಯಲ್ಲಿ ಹೆಚ್.ಎಸ್.ಪ್ರಕಾಶ್ ಅವರ ನಿಧನದ ಅನುಕಂಪ, ಅಂದಿನ ರಾಜಕೀಯ ಪರಿಸ್ಥಿತಿ ಅವರಿಗೆ ಅವಕಾಶ ಮಾಡಿಕೊಟ್ಟಿತು. ಪ್ರತಿ ಬಾರಿಯೂ ಲಾಟರಿ ಹೊಡೆಯುವುದಿಲ್ಲ. ಕ್ಷೇತ್ರದ ಜನರ ಪ್ರೀತಿ ಉಳಿಸಿಕೊಳ್ಳಬೇಕೆಂದರೆ ಪರಿಶ್ರಮ, ಸಾಮಾಜಿಕ ಕಳಕಳಿ ಹಾಗೂ ಬದ್ಧತೆ ಬೇಕಾಗುತ್ತದೆ ಎಂದು ಶಾಸಕ ಹೆಚ್.ಪಿ.ಸ್ವೂಪ್ ವಿರುದ್ದ ವಾಗ್ದಾಳಿ ನಡೆಸಿದರು.

ರಾಜ್ಯಾದ್ಯಂತ ಎಸ್‌ಐಆರ್ ಪ್ರಕ್ರಿಯೆ ಜು. 30ರಿಂದ ಪ್ರಾರಂಭವಾಗಲಿದೆ. ಈಗಾಗಲೇ ಬಿಜೆಪಿಯ ಬೂತ್ ಏಜೆಂಟರಿಗೆ ಹಲವು ಸುತ್ತಿನ ತರಬೇತಿ ನೀಡಲಾಗಿದೆ. ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯಬಾರದು ಎಂಬುದು ನಮ್ಮ ಉದ್ದೇಶ. ಈ ಪ್ರಕ್ರಿಯೆಯನ್ನು ಮುಂಬರುವ ಎಲ್ಲಾ ಚುನಾವಣೆಗೆ ತಾಲೀಮು ಎಂದು ಭಾವಿಸಿ ಕೆಲಸ ಮಾಡುತ್ತಿದ್ದೇವೆ ಎಂದರು.

> ಗೃಹಲಕ್ಷ್ಮಿ ಯೋಜನೆ ಫಲಾನುಭವಿಗಳಿಗೆ ಪ್ರತಿ ತಿಂಗಳು ನೀಡುವ 2 ಸಾವಿರ ರೂ. ಹಣ ಹಂಚಿಕೆಯಲ್ಲಿ ಭಾರೀ ಹಗರಣ ನಡೆದಿದೆ. 285 ಕೋಟಿ ರೂ. ಅವ್ಯವಹಾರ ನಡೆದಿದೆ ಎಂದು ಸಿಎಜಿ ವರದಿ ನೀಡಿದೆ. ಬಹುಶ: ಈಗ ಆ ಹಗರಣ 2800 ಕೋಟಿ ರೂ. ತಲುಪಿರಬಹುದು. ಸರ್ಕಾರ ಕೂಡಲೇ ದಾಖಲೆಗಳ ಮೂಲಕ ಸ್ಪಷ್ಟನೆ ನೀಡಬೇಕು. ಜನಸಾಮಾನ್ಯರ ತೆರಿಗೆ ಹಣ ಪೋಲಾಗದ ರೀತಿ ನೋಡಿಕೊಳ್ಳಬೇಕು.
>
> **- ಪ್ರೀತಂ ಗೌಡ,**
> **ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ**

### ವರಿಷ್ಠರು ಕ್ರಮ ಕೈಗೊಳ್ಳುವ ಭರವಸೆ

ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ವಿಚಾರಕ್ಕೆ ಸಂಬಂಧಿಸಿ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಶಾಸಕ ಮಹೇಶ್ ಟೆಂಗಿನಕಾಯಿ, ಮಾಜಿ ಶಾಸಕ ಎನ್.ಮಹೇಶ್ ಅವರ ನೇತೃತ್ವದಲ್ಲಿ ರಚಿಸಿದ್ದ ಸತ್ಯಶೋಧಾನ ಸಮಿತಿ ಈಗಾಗಲೇ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ವರದಿ ಸಲ್ಲಿಸಿದೆ. ಶೀಘ್ರದಲ್ಲೇ ವರದಿಯನ್ನು ರಾಷ್ಟ್ರಾಧ್ಯಕ್ಷರಿಗೆ ತಲುಪಿಸಲಾಗುತ್ತದೆ. ಇದು ಪಕ್ಷದ ಆಂತರಿಕ ವಿಚಾರವಾದ್ದರಿಂದ ಪಕ್ಷಕ್ಕೆ ದ್ರೋಹ ಬಗೆದವರ ಹೆಸರನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದು ಪ್ರೀತಂ ಗೌಡ ಹೇಳಿದರು.

ಉಪ್ಪು ತಿಂದವರು ನೀರು ಕುಡಿಯಲೇಬೇಕು. ಯಾರೂ ಪಕ್ಷಕ್ಕಿಂತ ದೊಡ್ಡವರಲ್ಲ. ಆಂತರಿಕವಾಗಿ ಏನು ಮಾಡಬೇಕೋ ಅದನ್ನು ವರಿಷ್ಠರು ಮಾಡುತ್ತಾರೆಂದರು.

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಬಿಜೆಪಿ ಯಾವತ್ತಿಗೂ ರೈತರ ಪರವಾಗಿ ಇರುತ್ತದೆ. ನೈಜ ರೈತರು ಯಾರು ಎಂಬುದನ್ನು ತಿಳಿದು ಅವರಿಗೆ ಬೆಂಬಲ ನೀಡುತ್ತೇವೆ. ಟೌನ್‌ಶಿಪ್ ಪರ ಮತ್ತು ವಿರೋಧ ಪ್ರತಿಭಟನೆಗಳು ನಡೆಯುತ್ತಿವೆ. ಒಂದು ವೇಳೆ ಕಾಂಗ್ರೆಸ್ ಸರ್ಕಾರ ಭೂಮಿಗೆ ಈಗ ನಿಗದಿಪಡಿಸಿದ್ದಕ್ಕಿಂತ ಅಧಿಕ ಪರಿಹಾರ ನೀಡಲು ಮುಂದಾದಾಗ ರೈತರು ಅದಕ್ಕೆ ಒಪ್ಪಿದರೆ ನಾವು ರೈತರನ್ನೇ ಬೆಂಬಲಿಸಬೇಕಾಗುತ್ತದೆ. ನಾನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ವಕ್ತಾರನಾಗಲು ಬಯಸುವುದಿಲ್ಲ ಎಂದರು.

# ಸಕಲೇಶಪುರ ತಹಸೀಲ್ದಾರ್ ಜೀಪ್ ಡಿಕ್ಕಿಯಾಗಿ ವ್ಯಕ್ತಿ ಸಾವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ತಾಲೂಕಿನ ರಾಷ್ಟ್ರೀಯ ಹೆದ್ದಾರಿ 75ರ ಈಶ್ವರಹಳ್ಳಿ ಕೂಡಿಗೆ ಬಳಿ ಸಕಲೇಶಪುರ ತಹಸೀಲ್ದಾರ್ ಸುಪ್ರೀತಾ ಅವರಿದ್ದ ಸರ್ಕಾರಿ ಜೀಪ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಮೃತಪಟ್ಟು ಮತ್ತೊಬ್ಬ ಗಂಭೀರ ಗಾಯಗೊಂಡಿದ್ದಾರೆ.

ಮೃತನನ್ನು ಜಮ್ಷದ್ (58) ಎಂದು ಗುರುತಿಸಲಾಗಿದೆ.

ಸೋಮವಾರ ಬೆಳಿಗ್ಗೆ ಕೆಲಸದ ನಿಮಿತ್ತ ಜಮ್ಷದ್ ಹಾಗೂ ನದೀಮ್ ಸಕಲೇಶಪುರಕ್ಕೆ ತೆರಳುತ್ತಿದ್ದರು. ಅದೇ ವೇಳೆ ಎದುರುಗಡೆಯಿಂದ ಬಂದ ತಹಸೀಲ್ದಾರ್ ಚಲಿಸುತ್ತಿದ್ದ ಜೀಪ್, ಈಶ್ವರಹಳ್ಳಿ ಕೂಡಿಗೆ ಸಮೀಪ, ಚಾಲಕನ ನಿಯಂತ್ರಣ ತಪ್ಪಿ ಬೈಕ್‌ಗೆ ಗುದ್ದಿದೆ. ಡಿಕ್ಕಿಯ ರಭಸಕ್ಕೆ ಬೈಕ್ ಸವಾರ ಜಮ್ಷದ್ ತೀವ್ರ ರಕ್ತಸ್ರಾವದಿಂದ ಹೆದ್ದಾರಿಯಲ್ಲೇ ಕೊನೆಯುಸಿರೆಳೆದಿದ್ದಾನೆ. ಕೂಡಲೇ ಗಾಯಾಳುವನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ನೀಡಲು ತಹಸೀಲ್ದಾರ್ ಸೂಚಿಸಿದರು. ಗಾಯಾಳು ನದೀಮ್‌ಗೆ ಹಾಸನದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಅವರು ಹಾಸನದ ಪೆನ್‌ಷನ್ ಮೊಹಲ್ಲಾ ನಿವಾಸಿ ಎಂದು ತಿಳಿದು ಬಂದಿದೆ.

ಅಪಘಾತದ ತೀವ್ರತೆಗೆ ತಹಶೀಲ್ದಾರ್ ಅವರ ಸರ್ಕಾರಿ ಕಾರು ಹಾಗೂ ಬೈಕ್ ಜಖಂಗೊಂಡಿವೆ.

ಸುದ್ದಿ ತಿಳಿಯುತ್ತಿದ್ದಂತೆಯೇ ಸ್ಥಳೀಯ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪರಿಹಾರದ ಭರವಸೆ: ಈ ಕುರಿತು ಮಾತನಾಡಿದ ಶಾಸಕ ಸಿಮೆಂಟ್ ಮಂಜು, ಈ ಘಟನೆ ನಡೆಯಬಾರದಿತ್ತು. ಯಾವುದೇ ಅಪಘಾತ ಉದ್ದೇಶಪೂರ್ವಕವಾಗಿ ನಡೆಯುವುದಿಲ್ಲ ಎಂದರು.

ಆದರೂ ಮಾನವೀಯ ದೃಷ್ಟಿಯಿಂದ ತಹಸೀಲ್ದಾರ್ ಜೊತೆ ಚರ್ಚಿಸಿ ಸರ್ಕಾರಕ್ಕೆ ವರದಿ ನೀಡುವ ಮೂಲಕ ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ಕೊಡಿಸುವ ಕೆಲಸ ಮಾಡಲಾಗುವುದು ಎಂದು ತಿಳಿಸಿದರು.

ಹೆದ್ದಾರಿಯಲ್ಲಿ ಎಷ್ಟೋ ಕಡೆ ಅಂಡರ್ ಪಾಸ್ ಇಲ್ಲದಿರುವುದೂ ಈ ರೀತಿಯ ಅಪಘಾತಕ್ಕೆ ಕಾರಣ ಎಂದ ಮಂಜು, ಕೂಡಲೇ ಸ್ಪೀಡ್ ಬ್ರೇಕರ್ ಅಳವಡಿಸಬೇಕು. ಜೊತೆಗೆ ಅಂಡರ್‌ಪಾಸ್ ನಿರ್ಮಾಣ ಮಾಡಲು ಕ್ರಮವಹಿಸಬೇಕು ಎಂದು ಮಂಜು ಮನವಿ ಮಾಡಿದರು.

ಇದೇ ವೇಳೆ ಸಕಲೇಶಪುರ-ಮಾರನಹಳ್ಳಿವರೆಗೆ ಒಂದು ಬದಿಯ ರಸ್ತೆ ಸಂಪೂರ್ಣ ಪೂರ್ಣವಾಗುವ ಹಂತಕ್ಕೆ ಬಂದಿದೆ. ಆ ಮೂಲಕ ವಾಹನ ಸಂಚಾರ ಯಾವುದೇ ಅಡೆತಡೆ ಇಲ್ಲದೆ ಸುಗಮವಾಗಿ ನಡೆದರೆ ಸಾಕು ಎಂದರು.

# ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿದ ಮಹಾನ್ ವ್ಯಕ್ತಿ ಅಂಬೇಡ್ಕರ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಡಾ. ಬಿ.ಆರ್. ಅಂಬೇಡ್ಕರ್ ಅವರು ಯಾವುದೇ ಒಂದು ಸಮುದಾಯಕ್ಕಾಗಿ ಮಾತ್ರ ಸಂವಿಧಾನ ರಚಿಸಿಲ್ಲ. ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸಾಮಾಜಿಕ ನ್ಯಾಯ, ಸಮಾನ ಅವಕಾಶ ಹಾಗೂ ಘನತೆಯ ಬದುಕು ದೊರೆಯುವಂತೆ ಮಾಡಿದ್ದಾರೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲೂಕಿನ ಯಸಳೂರು ಹೋಬಳಿ ಕೇಂದ್ರದಲ್ಲಿ ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಇಂದು ಸಾಮಾನ್ಯ ವ್ಯಕ್ತಿ ಜನಪ್ರತಿನಿಧಿಯಾಗಲು ಸಾಧ್ಯವಾಗಿರುವುದು ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಕಲ್ಪಿಸಿದ ಸಮಾನ ಅವಕಾಶ ಮತ್ತು ಮೀಸಲಾತಿ ವ್ಯವಸ್ಥೆಯಿಂದ ಎಂದು ಹೇಳಿದರು.

ಮಹಿಳೆಯರಿಗೆ ಶಿಕ್ಷಣ, ಉದ್ಯೋಗ ಹಾಗೂ ಆಸ್ತಿಯಲ್ಲಿ ಸಮಾನ ಹಕ್ಕು ದೊರೆಯುವಂತೆ ಮಾಡುವಲ್ಲಿ ಅಂಬೇಡ್ಕರ್ ಅವರ ಕೊಡುಗೆ ಅಪಾರವಾಗಿದೆ. ಕಾರ್ಮಿಕರ ಹಕ್ಕುಗಳ ರಕ್ಷಣೆಯಲ್ಲೂ ಮಹತ್ವದ ಸುಧಾರಣೆಗಳನ್ನು ಜಾರಿಗೆ ತಂದಿದ್ದಾರೆ ಎಂದು ತಿಳಿಸಿದರು.

ಯಸಳೂರಿನಲ್ಲಿ ಎಲ್ಲ ಸಮುದಾಯಗಳ ಸಹಕಾರದಿಂದ ಪ್ರಮುಖ ಸ್ಥಳದಲ್ಲಿ ಅಂಬೇಡ್ಕರ್ ಪುತ್ಥಳಿ ನಿರ್ಮಾಣವಾಗುತ್ತಿರುವುದು ನಿಜವಾದ ಪ್ರಜಾಪ್ರಭುತ್ವದ ಸಂಕೇತವಾಗಿದೆ. ಪುತ್ಥಳಿ ಶೀಘ್ರ ಪೂರ್ಣಗೊಂಡು ಯುವಜನತೆಗೆ ಅಂಬೇಡ್ಕರ್ ಅವರ ಸಮಾನತೆ ಮತ್ತು ಸಂವಿಧಾನದ ಸಂದೇಶ ತಲುಪುವಂತಾಗಲಿ ಎಂದು ಆಶಿಸಿದರು.

ಮಾಜಿ ಶಾಸಕ ಎಚ್.ಕೆ. ಕುಮಾರಸ್ವಾಮಿ ಮಾತನಾಡಿ, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪ್ರತಿಮೆ ನಿರ್ಮಾಣವು ಕೇವಲ ಸ್ಮಾರಕವಲ್ಲ. ಅವರ ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಮಾನವೀಯ ಮೌಲ್ಯಗಳನ್ನು ಸಮಾಜದ ಪ್ರತಿಯೊಬ್ಬರಿಗೂ ತಲುಪಿಸುವ ಕಾರ್ಯವಾಗಿದೆ ಎಂದರು.

ಜಾತಿ-ಧರ್ಮದ ಭೇದ ಭಾವವನ್ನು ತೊರೆದು ಎಲ್ಲರೂ ಸಮಾನರು ಎಂಬ ಅಂಬೇಡ್ಕರ್ ಅವರ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಕಲೇಶಪುರ, ಆಲೂರು ಹಾಗೂ ಹಾನಬಾಳಿನ ಬಳಿಕ ಇದೀಗ ಯಸಳೂರಿನಲ್ಲೂ ಅಂಬೇಡ್ಕರ್ ಪ್ರತಿಮೆ ನಿರ್ಮಾಣವಾಗುತ್ತಿರುವುದು ಸಂತಸದ ಸಂಗತಿ. ಪ್ರತಿಮೆಯೊಂದಿಗೆ ಅವರ ವಿಚಾರಧಾರೆಯೂ ಹಳ್ಳಿಹಳ್ಳಿಗೂ ತಲುಪಬೇಕು ಎಂದು ಹೇಳಿದರು. ಇದೇ ವೇಳೆ ಪುತ್ಥಳಿ ನಿರ್ಮಾಣ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರ ಕಾರ್ಯವನ್ನು ಶ್ಲಾಘಿಸಿದರು.

ಅಂಬೇಡ್ಕರ್ ಪುತ್ಥಳಿ ನಿರ್ಮಾಣ ಸಮಿತಿಯ ಅಧ್ಯಕ್ಷ ಎ.ಎಸ್. ಈರಯ್ಯ, ಬಿಎಸ್‌ಪಿ ಜಿಲ್ಲಾ ಅಧ್ಯಕ್ಷ ಲಕ್ಷ್ಮಣ್ ಕೀರ್ತಿ, ವೀರಶೈವ ಸಮಾಜದ ಮುಖಂಡ ಮುರುಗೇಂದ್ರ ಮತ್ತಿತರರಿದ್ದರು.

# ಭಾರತೀಯ ಕಲೆ ಉಳಿಸಿ-ಬೆಳೆಸುವ ಕೆಲಸವಾಗಲಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಜೀವಂತವಾಗಿಡಬೇಕೆಂದರೆ ಯುವ ಸಮುದಾಯ ಅದನ್ನು ಉಳಿಸಿ ಬೆಳೆಸಬೇಕು ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ಪಟ್ಟಣದ ಶಿವಜ್ಯೋತಿ ಕಲ್ಯಾಣ ಮಂಟಪದಲ್ಲಿ ಪ್ರತಿಮಾ ಟ್ರಸ್ಟ್ ಹಾಗೂ ಕರ್ನಾಟಕ ಪಬ್ಲಿಕ್ ಸ್ಕೂಲ್ ಆಯೋಜಿಸಿದ್ದ ವಾರ್ಷಿಕ ರಂಗ ತರಬೇತಿ ಶಿಬಿರದ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳನ್ನು ಕಲೆಗೆ ಹತ್ತಿರವಾಗಿ ಕರೆತರಬೇಕು ಹೊರತು ದೂರ ಸರಿಸಬಾರದು. ಮುಂದಿನ ಪೀಳಿಗೆಗೆ ಅದರ ಮಹತ್ವ ಪರಿಚಯ ಮಾಡಿಕೊಡವ ಅಗತ್ಯವಿದೆ. ನನಗೂ ರಂಗ ಕುಣಿತದ ಬಗ್ಗೆ ವಿಶೇಷ ಆಸಕ್ತಿ ಇದೆ. ಕಲೆಗೆ ಬೆಲೆಯನ್ನು ಕಟ್ಟಲಾಗದು, ಕಲೆ ಸಾಹಿತ್ಯ ಸಂಸ್ಕೃತಿ ಉಳಿಸುವ ನಿಟ್ಟಿನಲ್ಲಿ ಪ್ರತಿಮಾ ಟ್ರಸ್ಟ್ ಉತ್ತಮ ಕಾರ್ಯ ಮಾಡುತ್ತಿದೆ. ರಂಗ ಪರಿಕರಕ್ಕಾಗಿ ಈಗಾಗಲೇ ಒಂದೂವರೆ ಲಕ್ಷ ರೂ. ನೀಡಿದ್ದೇನೆ. ಪರಿಕರಗಳನ್ನು ಸುಸ್ಥಿತಿಯಲ್ಲಿಟ್ಟು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಡೊಳ್ಳು ವಾದ್ಯ ತರಬೇತಿ, ವಾದ್ಯ ಖರೀದಿಗೆ ಸಹಕಾರ ನೀಡುತ್ತೇನೆ. ಸರ್ಕಾರಿ ಶಾಲೆಗಳ ಮಕ್ಕಳಿಗೆ ರಂಗ ಕುಣಿತ, ಕಂಸಾಳೆ, ತಮಟೆ ವಾದ್ಯ ಇನ್ನಿತರ ಜಾನಪದ ಕಲೆಗಳ ತರಬೇತಿಯನ್ನು ನೀಡಿದ ಹೆಗ್ಗಳಿಕೆ ಪ್ರತಿಮಾ ಟ್ರಸ್ಟ್‌ಗೆ ಸಲ್ಲುತ್ತದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡಪರ ಸಂಘಟನೆಗಳು, ಕಲೆ ಸಾಹಿತ್ಯ ಸಂಸ್ಕೃತಿಯ ಉಳಿವಿಗೆ, ಪ್ರೋತ್ಸಾಹಿಸಬೇಕೆಂದು ಇದೇ ವೇಳೆ ಶಾಸಕರು ಆಗ್ರಹಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಹೆಚ್.ಸತೀಶ್, ಬಿಆರ್‌ಸಿ ಕೆ.ಎನ್.ಅನಿಲ್, ಮುಖ್ಯ ಶಿಕ್ಷಕಿ ನೇತ್ರಾವತಿ, ದೇವರಾಜೇಗೌಡ, ಪ್ರತಿಮಾ ಟ್ರಸ್ಟ್ ಅಧ್ಯಕ್ಷ ಉಮೇಶ್ ತೆಂಕನಹಳ್ಳಿ, ನಾಗೇಶ್, ನಾಗೇಂದ್ರ ಮತ್ತಿತರರಿದ್ದರು.

# ದೇವಾಲಯ ಹುಂಡಿ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ದೇವಾಲಯದ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 400 ಗ್ರಾಂ ತೂಕದ ಬೆಳ್ಳಿ ಆಭರಣ ಹಾಗೂ ಅಂದಾಜು 10 ಸಾವಿರ ರೂ. ನಗದು ಕಳವು ಮಾಡಿರುವ ಘಟನೆ ತಾಲ್ಲೂಕಿನ ಅಗ್ರಹಾರ ಗ್ರಾಮದಲ್ಲಿ ನಡೆದಿದೆ.

ಶ್ರೀ ಅಣ್ಣಪ್ಪ ದೇವಸ್ಥಾನದಲ್ಲಿ ಜೂ. 26ರ ರಾತ್ರಿ ಕಳ್ಳತನವಾಗಿದೆ. ಜೂ. 27ರ ಬೆಳಿಗ್ಗೆ ಪೂಜೆ ಮಾಡಲೆಂದು ಅರ್ಚಕರು ದೇವಸ್ಥಾನಕ್ಕೆ ಹೋದಾಗ ಬಾಗಿಲು ಮುರಿದಿರುವುದು ಗೊತ್ತಾಗಿದೆ. ಗರ್ಭಗುಡಿಯ ಒಳಗೆ ಇಟ್ಟಿದ್ದ ತಾಮ್ರದ ಬಿಂದಿಗೆಯಂತಿರುವ ಹುಂಡಿ ಹಾಗೂ ಮತ್ತೊಂದು ಸ್ಟೀಲ್ ಹುಂಡಿ, ದೇವರ ತಲೆಯ ಮೇಲೆ ಹಾಕಿದ್ದ ಬೆಳ್ಳಿಯ ನಾಗರ ಮತ್ತು ಕಿರೀಟ ಕಳವು ಮಾಡಿದ್ದಾರೆ. ಹುಂಡಿಯಲ್ಲಿ ಅಂದಾಜು 10 ಸಾವಿರ ರೂ., ಕಳುವಾಗಿರುವ ಬೆಳ್ಳಿ ಸಾಮಗ್ರಿ 400 ಗ್ರಾಂ ತೂಕ ಹೊಂದಿತ್ತು ಎನ್ನಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಪತ್ರಕರ್ತರು ಒತ್ತಡಕ್ಕೆ ಮಣಿಯದೆ ಸತ್ಯ ಪ್ರತಿಪಾದಿಸಬೇಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪತ್ರಕರ್ತರು ಯಾವುದೇ ಬಾಹ್ಯ ಶಕ್ತಿಗಳ ಪ್ರಭಾವಕ್ಕೆ ಒಳಗಾಗದೆ ತಮ್ಮ ವಿವೇಚನೆ, ನೈತಿಕತೆ ಮತ್ತು ಸಾಮಾಜಿಕ ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಿದರೆ ಮಾತ್ರ ಪ್ರಜಾಪ್ರಭುತ್ವ ಬಲಿಷ್ಠವಾಗುತ್ತದೆ ಎಂದು ತೆಂಕಲಗೂಡಿನ ಶ್ರೀ ಚನ್ನಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ಪಟ್ಟಣದ ಲಯನ್ಸ್ ಹಾಲ್‌ನಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ತಾಲ್ಲೂಕು ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಪತ್ರಿಕೋದ್ಯಮವು ಸಮಾಜದ ಕಣ್ಣು ಮತ್ತು ಕಿವಿಯಂತೆ ಕಾರ್ಯನಿರ್ವಹಿಸುವ ಮಹತ್ತರ



ಹೊಣೆಗಾರಿಕೆಯ ಕ್ಷೇತ್ರವಾಗಿದೆ. ಸತ್ಯವನ್ನು ನಿರ್ಭೀತಿಯಿಂದ ಜನರ ಮುಂದಿಡುವುದು ಪತ್ರಕರ್ತರ ಕರ್ತವ್ಯವಾಗಿದೆ. ಸುದ್ದಿ ಪ್ರಸಾರದಲ್ಲಿ ಪ್ರಾಮಾಣಿಕತೆ, ನಿಷ್ಪಕ್ಷಪಾತತೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಮರೆಯಬಾರದೆಂದು ಕಿವಿಮಾತು ಹೇಳಿದರು.

ಶಾಸಕ ಸಿಮೆಂಟ್ ಮಂಜು ಮಾತನಾಡಿ, ಪತ್ರಕರ್ತರು ರಾಜಕೀಯ, ಆರ್ಥಿಕ ಅಥವಾ ವೈಯಕ್ತಿಕ ಒತ್ತಡಗಳಿಗೆ ಮಣಿಯದೆ ನಿಷ್ಪಕ್ಷಪಾತವಾಗಿ ವರದಿ ಮಾಡಿದಾಗ ಮಾತ್ರ ಮಾಧ್ಯಮಗಳ ಮೇಲಿನ ಸಾರ್ವಜನಿಕರ ವಿಶ್ವಾಸ ಗಟ್ಟಿಯಾಗುತ್ತದೆ. ಸಮಾಜದ ಅಭಿವೃದ್ಧಿಯಲ್ಲಿ ಪತ್ರಕರ್ತರ ಪಾತ್ರ ಮಹತ್ವದ್ದಾಗಿದೆ. ಜನರ ಧ್ವನಿಯನ್ನು ಸರ್ಕಾರದ ಮಟ್ಟಕ್ಕೆ ತಲುಪಿಸುವ ಸೇತುವೆಯಾಗಿ ಪತ್ರಕರ್ತರು ಕಾರ್ಯನಿರ್ವಹಿಸುತ್ತಾರೆ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಮಾತನಾಡಿ, ಪತ್ರಿಕೋದ್ಯಮವು ಹಣ ಸಂಪಾದನೆಯ ಉದ್ದಿಮೆ ಅಲ್ಲ. ಅದು ಸೇವಾ ಮನೋಭಾವದ ಕಾಯಕವಾಗಿದೆ. ಅನೇಕ ಸವಾಲು, ಒತ್ತಡಗಳು ಮತ್ತು ಅಪಾಯಗಳ ನಡುವೆಯೂ ಸತ್ಯದ ಪರವಾಗಿ ನಿಲ್ಲುವ ಧೈರ್ಯವನ್ನು ಪತ್ರಕರ್ತರು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ, ಮಾಜಿ ಶಾಸಕ ಬಿ.ಆರ್.ಗುರುದೇವ್, ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಮುರಳಿ ಮೋಹನ್, ಕಾಂಗ್ರೆಸ್ ತಾಲ್ಲೂಕು ಅಧ್ಯಕ್ಷ ಬೈರಮುಡಿ ಚಂದ್ರು, ಬಿಜೆಪಿ ತಾಲ್ಲೂಕು ಅಧ್ಯಕ್ಷ ಅಶ್ವಥ್, ಜಿಲ್ಲಾ ಸಂಘದ ಕಾರ್ಯದರ್ಶಿ ಖುಶ್ವಂತ್, ರಾಷ್ಟ್ರೀಯ ಕಾರ್ಯಕಾರಿ ಮಂಡಳಿ ಸದಸ್ಯರಾದ ರವಿ ನಾಕಲಗೂಡು, ಹೆತ್ತೂರು ನಾಗರಾಜ್, ಮಾಜಿ ಅಧ್ಯಕ್ಷ ಬಾಳ್ಳುಗೋಪಾಲ್, ಲಯನ್ಸ್ ಟ್ರಸ್ಟ್ ಅಧ್ಯಕ್ಷ ಸಂಜೀತ್ ಶೆಟ್ಟಿ, ಲಯನ್ಸ್ ಅಧ್ಯಕ್ಷ ಗಿರೀಶ್ ಮಂಜುನಾಥ್, ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷ ಗುರುಮೂರ್ತಿ, ಬದ್ರಿಯಾ ಮಸೀದಿ ಮಾಜಿ ಅಧ್ಯಕ್ಷ ಆದಮ್ ಹಾಜಿ ಮತ್ತಿತರರಿದ್ದರು.

ಪತ್ರಕರ್ತ ಹೆಚ್.ಡಿ.ಕುಮಾರ್ ಪ್ರಾರ್ಥಿಸಿದರು. ಪ್ರಧಾನ ಕಾರ್ಯದರ್ಶಿ ಅಕ್ಬರ್ ಜುನೈದ್ ಸ್ವಾಗತಿಸಿದರು. ಖಜಾಂಚಿ ಯೋಗೇಶ್ ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಕ್ಷ ನವೀನ್ ಸದಾ ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ನಿರಂಜನ್ ಮೂರ್ತಿ, ವಿನಯ್ ಕೂಡರಸ್ತೆ, ಚೇತನ್, ಅರ್ಜುನ್, ಮಲ್ನಾಡ್ ಮೆಹಬೂಬ್, ಹೆತ್ತೂರು ರವಿ ಮತ್ತಿತರರಿದ್ದರು.

# ಜಿಲ್ಲೆಯ ಪತ್ರಕರ್ತರ ಒಗ್ಗಟ್ಟು ಮಾದರಿ: ಸಂಸದ ಶ್ರೇಯಸ್

## ಪತ್ರಕರ್ತರ ಸಂಘದ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ | ಕ್ರೀಡಾ ಪ್ರೇಮ ಮೆರೆದ ಪತ್ರಕರ್ತರು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಒಗ್ಗಟ್ಟು ಇಡೀ ರಾಜ್ಯಕ್ಕೆ ಮಾದರಿ ಎಂದು ಹೇಳಿಕೊಳ್ಳಲು ಹೆಮ್ಮೆ ಎನಿಸುತ್ತದೆ ಎಂದು ಸಂಸದ ಶ್ರೇಯಸ್ ಪಟೇಲ್ ಮೆಚ್ಚುಗೆ ವ್ಯಕ್ತಪಡಿಸಿದರು.

ಪತ್ರಿಕಾ ದಿನಾಚರಣೆ ಅಂಗವಾಗಿ ನಗರದ ಸರ್ಕಾರಿ ವಿಜ್ಞಾನ ಕಾಲೇಜಿನ ಟರ್ಫ್ ಮೈದಾನದಲ್ಲಿ ಭಾನುವಾರ ನಡೆದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಾನು ಜನಪ್ರತಿನಿಧಿ ಆಗುವುದಕ್ಕಿಂತ ಮೊದಲಿನಿಂದಲೂ ಜಿಲ್ಲೆಯ ಪತ್ರಕರ್ತರನ್ನು ಹತ್ತಿರದಿಂದ ಕಂಡಿದ್ದೇನೆ. ಪರಸ್ಪರ ಸೌಹಾರ್ದತೆ, ಸಹಬಾಳ್ವೆ ಹಾಗು ಉತ್ತಮ ಚಿಂತನೆಗಳ ಮೂಲಕ ಜಿಲ್ಲೆಯ ಅಭಿವೃದ್ಧಿಗೆ ತಮ್ಮದೇಯಾದ ಕೊಡುಗೆ ನೀಡುತ್ತಿದ್ದಾರೆ ಎಂದರು.

ಜಿಲ್ಲೆಯಲ್ಲಿ ಪತ್ರಕರ್ತರು ಹಾಗೂ ಜನಪ್ರತಿನಿಧಿಗಳು ಒಂದು ಕುಟುಂಬದ ಸದಸ್ಯರಂತೆ ಇದ್ದೇವೆ. ನಮ್ಮ ನಡುವೆ ಅವಿನಾಭಾವ ಸಂಬಂಧವಿದೆ. ಇದು ಹೀಗೆಯೇ ಮುಂದುವರಿಯಲಿ ಎಂದು ಆಶಿಸಿದ ಅವರು, ಪತ್ರಕರ್ತರ ಸಂಘದ



ಕಟ್ಟಡದ ನವೀಕರಣಕ್ಕೆ ಮುಂದಿನ ದಿನಗಳಲ್ಲಿ ತಮ್ಮ ನಿಧಿಯಿಂದ ಅನುದಾನ ಕೊಡುವ ಭರವಸೆ ನೀಡಿದರು.

ರಾಜ್ಯ ಸಂಘಕ್ಕೆ ಕಳಶಪ್ರಾಯವಾಗಿ ಶಿವಾನಂದ ತಗಡೂರು ಅವರು ಕೆಲಸ ಮಾಡುತ್ತಿದ್ದಾರೆ. ಸದಾ ಒತ್ತಡದಲ್ಲಿ ಕೆಲಸ ಮಾಡುವ ಪತ್ರಕರ್ತರು ತಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳಬೇಕೆಂದರು.

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಮಾತನಾಡಿ, ಹಾಸನ ಜಿಲ್ಲಾ ಸಂಘವು ಹಲವಾರು ಚಟುವಟಕೆ ಹಮ್ಮಿಕೊಳ್ಳುವ ಮೂಲಕ ರಾಜ್ಯಕ್ಕೆ ಮಾದರಿಯಾಗಿದೆ. ಮಾನಸಿಕ ಒತ್ತಡ ನಿವಾರಣೆಗೆ ಕ್ರೀಡಾಕೂಟಗಳು ಪೂರಕವಾಗಿದ್ದು, ಎಲ್ಲರೂ ಭಾಗಿಯಾಗಿರುವುದು ಸ್ವಾಗತಾರ್ಹ. ಕ್ರೀಡೆಯಲ್ಲಿ ಸೋಲು-ಗೆಲುವು ಮುಖ್ಯ ಅಲ್ಲ. ಎಲ್ಲರೂ ಒಟ್ಟಾಗಿ ಸಮಯ ಕಳೆಯಲು ಇಂತಹ ಸಂದರ್ಭಗಳು ಅವಕಾಶ ಮಾಡಿ ಕೊಡುತ್ತವೆಂದರು.

ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಮಾತನಾಡಿ, ಕ್ರೀಡಾಕೂಟವನ್ನು ಸರಳವಾಗಿ ಆಯೋಜನೆ ಮಾಡಿದರೂ ಕ್ರೀಡಾ ಸಮಿತಿಯು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿದೆ. ಸಂಘದ ಕಟ್ಟಡ ನವೀಕರಣಕ್ಕೆ ಅನುದಾನದ ಭರವಸೆ ನೀಡಿದ ಸಂಸದರಿಗೆ ಧನ್ಯವಾದ ಹೇಳಿದರು.

ಶಾಸಕ ಹೆಚ್.ಪಿ.ಸ್ವರೂಪ್ ಮಾತನಾಡಿ, ಪತ್ರಕರ್ತರು ಒಗ್ಗಟ್ಟಾಗಿ ಕ್ರೀಡಾಕೂಟದಲ್ಲಿ ಭಾಗಿಯಾಗಿರುವುದು ಸಂತೋಷದ ವಿಷಯ. ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಎಂದರು.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಸ್.ಎಸ್.ರಘುಗೌಡ, ಉದ್ಯಮಿ ಕಂಚಮಾರನಹಳ್ಳಿ ಕಾಂತರಾಜು, ಕ್ರೀಡಾ ಇಲಾಖೆ ಮತ್ತು ಯುವಜನ ಸಬಲೀಕರಣ ಇಲಾಖೆ ನಿರ್ದೇಶಕ ಆನಂದಮೂರ್ತಿ ಕ್ರೀಡಾಕೂಟಕ್ಕೆ ಶುಭ ಹಾರೈಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಉಪಾಧ್ಯಕ್ಷರಾದ ಎನ್.ನಂಜುಂಡೇಗೌಡ, ಜಿ.ಪ್ರಕಾಶ್, ರಾಷ್ಟ್ರೀಯ ಮಂಡಳಿ ಸದಸ್ಯರಾದ ರವಿ ನಾಕಲಗೂಡು, ಹೆತ್ತೂರು ನಾಗರಾಜ್ ಇದ್ದರು. ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್ ಸ್ವಾಗತಿಸಿ ನಿರೂಪಿಸಿದರು. ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಲ್ಲಿಕಾರ್ಜುನ ಕೊಚ್ಚರಗಿ ವಂದಿಸಿದರು.

ಹೃದಯಾಘಾತದಿಂದ ನಿಧನರಾದ ಪತ್ರಕರ್ತ ಎನ್.ಎಸ್ ಶಂಕರ್ ಅವರ ನಿಧನಕ್ಕೆ ಸಂತಾಪ ಸೂಚಿಸಲಾಯಿತು.

### ಕ್ರೀಡಾಕೂಟದಲ್ಲಿ ವಿಜೇತರ ವಿವರ

30 ವರ್ಷದೊಳಗಿನವರ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಗಿರೀಶ್ ದೇಶಾಣಿ-ಪ್ರಥಮ, ಪ್ರದೀಪ್ -ದ್ವಿತೀಯ ಹಾಗು ಪ್ರಶಾಂತ್-ತೃತೀಯ ಸ್ಥಾನ ಪಡೆದರು.

40 ವರ್ಷದ ಒಳಗಿನವರ ಓಟದಲ್ಲಿ ಅಭಿಜಿತ್-ಪ್ರಥಮ, ಅಭಿಲಾಷ್-ದ್ವಿತೀಯ, ಸುನಿಲ್- ತೃತೀಯ ಸ್ಥಾನ ತಮ್ಮದಾಗಿಸಿಕೊಂಡರು. 50 ವರ್ಷದ ಒಳಗಿನವರ ಓಟದಲ್ಲಿ ಸ್ವರೂಪ್ ಮಳಲಿ -ಪ್ರಥಮ, ಶಿವಕುಮಾರ್ ಅರಕಲಗೂಡು-ದ್ವಿತೀಯ, ಹೆಚ್.ಆರ್.ರಾಘವೇಂದ್ರ-ತೃತೀಯ ಸ್ಥಾನ ಪಡೆದರು. ಮಹಿಳೆಯರ ವಿಭಾಗದಲ್ಲಿ ಪಿ.ಆರ್.ನಯನ-ಪ್ರಥಮ, ಶ್ರೀರಕ್ಷಾ-ದ್ವಿತೀಯ ಸ್ಥಾನ ಗಳಿಸಿದರು. ಗುಂಡು ಎಸೆತ ಸ್ಪರ್ಧೆಯ ಮಹಿಳೆಯರ ವಿಭಾಗದಲ್ಲಿ ಶ್ರೀರಕ್ಷಾ-ಪ್ರಥಮ, ನಯನ ಎರಡನೇ ಸ್ಥಾನಕ್ಕೆ ಭಾಜನರಾದರು.

ಪುರುಷರ ವಿಭಾಗ: (20-30 ವರ್ಷ), ಶರತ್-ಪ್ರಥಮ, ಪ್ರದೀಪ್-ದ್ವಿತೀಯ, ಸಂದೀಪ್ -ತೃತೀಯ, 30-40 ವರ್ಷ: ಅಶೋಕ್-ಪ್ರಥಮ, ಅಭಿಲಾಷ್-ದ್ವಿತೀಯ, ಸಂಜು-ತೃತೀಯ,

40-50 ವರ್ಷ: ಶ್ರೀನಿವಾಸ್ ಉಳ್ಳಾವಳ್ಳಿ-ಪ್ರಥಮ, ವಿನಯ್-ದ್ವಿತೀಯ ಮತ್ತು ದಯಾನಂದ ಸಕಲೇಶಪುರ-ತೃತೀಯ ಸ್ಥಾನ ತಮ್ಮದಾಗಿಸಿಕೊಂಡರು.

50-60 ವರ್ಷ: ಜೈ ಭೀಮ್ ಮಂಜು-ಪ್ರಥಮ, ಲಕ್ಷ್ಮಣ್ ಬೇಲೂರು-ದ್ವಿತೀಯ ಹಾಗು ವಿರೂಪಾಕ್ಷ ಅರಕಲಗೂಡು-ತೃತೀಯ, 60 ವರ್ಷ ಮೇಲ್ಪಟ್ಟವರ ಪಂದ್ಯದಲ್ಲಿ ಮೆಹಬೂಬ್ ಸಕಲೇಶಪುರ ಪ್ರಥಮ ಸ್ಥಾನ, ಪುಟ್ಟಣ್ಣ ದಿಡಗ ದ್ವಿತೀಯ ಬಹುಮಾನಕ್ಕೆ ಭಾಜನರಾದರು.

ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೇಲೂರು ಗಣೇಶ್ ನೇತೃತ್ವದ ಹಾಸನಾಂಬ ತಂಡ ಪ್ರಥಮ, ಅಭಿಲಾಷ್ ಹೊಳೆನರಸೀಪುರ ನಾಯಕತ್ವದ ಕಾವೇರಿ ತಂಡ ದ್ವಿತೀಯ ಮತ್ತು ವಿ.ಕಿರಣ್ ನೇತೃತ್ವದ ವಾಟೆಹೊಳೆ ತಂಡ ಮೂರನೇ ಬಹುಮಾನ ಪಡೆಯಿತು. ಜಿಲ್ಲೆಯ ಎಲ್ಲಾ ಪತ್ರಕರ್ತರು ಪಂದ್ಯಾವಳಿಯಲ್ಲಿ ಭಾಗವಹಿಸಿ ಕ್ರೀಡಾ ಸ್ಫೂರ್ತಿ ಮೆರೆದರು.

# ರಂಗಭೂಮಿ ಕ್ಷೇತ್ರಕ್ಕೆ ಜಿಲ್ಲೆಯ ಕೊಡುಗೆ ಅಪಾರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಹಾಸನ ಜಿಲ್ಲೆ ರಂಗಭೂಮಿಗೆ ವಿಶೇಷ ಕೊಡುಗೆ ನೀಡಿದೆ ಎಂದು ರಂಗಭೂಮಿ ಕಲಾವಿದೆ ಪೂಜಾ ರಘುನಂದನ್ ಹೇಳಿದರು.

ಪಟ್ಟಣದ ವಿವೇಕಾನಂದ ಇಂಟರ್ನ್ಯಾಷನಲ್ ಶಾಲೆಯಲ್ಲಿ ರೋಟರಿ ಸಂಸ್ಥೆ ವತಿಯಿಂದ ಆಯೋಜಿಸಿದ್ದ ರಂಗಭೂಮಿ ಬಗ್ಗೆ ಮಕ್ಕಳಿಗೆ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿ, ಪೌರಾಣಿಕ ನಾಟಕ, ಐತಿಹಾಸಿಕ ನಾಟಕಗಳ ಮೂಲಕ ರಾಮಾಯಣ-ಮಹಾಭಾರತದಂತ ಮಹಾನ್ ಗ್ರಂಥಗಳ ಸಂಸ್ಕಾರ ಸಂಸ್ಕೃತಿಯ ಪರಿಚಯ ಮಾಡಿಕೊಟ್ಟಿದೆ. ಮಕ್ಕಳಲ್ಲಿ ಕಲೆ ಸಾಹಿತ್ಯ ಸಂಸ್ಕೃತಿಯ ಮೂಲಕ ಸಂಸ್ಕಾರವನ್ನು ಬೆಳೆಸಬೇಕು. ಆ ಮೂಲಕ ಸಂಸ್ಕಾರಯುತ ಬಾಲ ನಟರನ್ನು ತಯಾರು ಮಾಡಬೇಕು. ಪರಿಸರ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ರೂಪಕಗಳು, ಪಲ್ಸ್ ಪೋಲಿಯೋ ಅಭಿಯಾನ, ಜಿಲ್ಲೆಯ ಇತಿಹಾಸ ಸ್ಮರಿಸುವ ನಾಟಕಗಳನ್ನು ಸಿದ್ಧಪಡಿಸಿ ಮಕ್ಕಳ ಮೂಲಕ ಅಭಿನಯಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಸಲಹೆ ನೀಡಿದರು.

ಚಲನಚಿತ್ರಗಳಲ್ಲಿ ರಿಟೇಕ್‌ಗೆ ಅವಕಾಶವಿದೆ. ಆದರೆ ನಾಟಕ ಹಾಗೂ ರಂಗಭೂಮಿಯಲ್ಲಿ ಆ ಅವಕಾಶವಿಲ್ಲ. ರಂಗಭೂಮಿ ಕಲಾವಿದರಾಗಿ ರೂಪುಗೊಳ್ಳಲು ವಿಪುಲ ಅವಕಾಶಗಳಿವೆ. ಮೈಸೂರಿನ ರಂಗಾಯಣ, ಶಿವಮೊಗ್ಗದ ಹೆಗ್ಗೋಡು, ಮೈಸೂರಿನ ಮಂಡ್ಯ ರಮೇಶ್ ಅವರ ನಟನ ಶಾಲೆಗಳಿವೆ. ಶಿಕ್ಷಣದ ಸಂಗಡ ಬಾಲ್ಯದಲ್ಲಿ ಮಕ್ಕಳು ಸಾಹಿತ್ಯ ಸಂಸ್ಕೃತಿ, ಸಂಸ್ಕಾರವನ್ನು ಅರಿಯಬೇಕು. ಸಂಗೀತ, ಜನಪದ, ರಂಗಭೂಮಿ, ಭರತನಾಟ್ಯ, ಗಮಕ ಇನ್ನಿತರ ಕಲೆಗಳನ್ನು ಮೈಗೂಡಿಸಿಕೊಳ್ಳಬೇಕು. ರಂಗಭೂಮಿ ಹಾಗೂ ಚಲನಚಿತ್ರಕ್ಕೆ ಇರುವ ವ್ಯತ್ಯಾಸ, ಅಭಿನಯ ಕಲೆ, ಸಣ್ಣ ಸಣ್ಣ ರೂಪಕಗಳ ಬಗ್ಗೆ ಉಪನ್ಯಾಸ ನೀಡಿದರು.

ರೋಟರಿ ಸಂಸ್ಥೆಯ ಅಧ್ಯಕ್ಷ ಜ್ಯೋತಿ ಶ್ರೀನಿವಾಸ್, ಪ್ರಾಂಶುಪಾಲ ಮಹಾದೇವ್ ಇದ್ದರು.

# ಭಯವೇ ದೊಡ್ಡ ಶತ್ರು, ಭಯ ಗೆದ್ದವನೇ ನಿಜವಾದ ಹೀರೋ!

ಭಯವು ಮಾನವನ ಮನಸ್ಸಿನಲ್ಲೇ ಹುಟ್ಟುವ ಅತಿ ದೊಡ್ಡ ಅಡೆತಡೆಯಾಗಿದೆ. ಹೊರಗಿನ ಶತ್ರುಗಳು ಕೆಲವೊಮ್ಮೆ ದೇಹಕ್ಕೆ ಮಾತ್ರ ಹಾನಿ ಮಾಡಬಹುದು. ಆದರೆ ಭಯವು ಮನಸ್ಸನ್ನು ದುರ್ಬಲಗೊಳಿಸಿ ವ್ಯಕ್ತಿಯ ಸಂಪೂರ್ಣ ಸಾಮರ್ಥ್ಯವನ್ನು ಕುಗ್ಗಿಸುತ್ತದೆ. ಭಯವನ್ನು ಜಯಿಸುವವನೇ ನಿಜವಾದ ವಿಜಯಿ ಎಂದು ಹೇಳುವುದಕ್ಕೆ ಕಾರಣ, ಆತ ತನ್ನ ಒಳಗಿನ ಮಿತಿಗಳನ್ನು ಮೀರಿ ಹೊಸ ಸಾಧನೆಗಳನ್ನು ಮಾಡಬಲ್ಲನು. ಇತಿಹಾಸದಲ್ಲಿ ಅನೇಕ ಮಹಾನ್ ವ್ಯಕ್ತಿಗಳು ಭಯವನ್ನು ಗೆದ್ದು ಜಗತ್ತನ್ನು ಬದಲಿಸಿದ್ದಾರೆ. ಉದಾಹರಣೆಗೆ, ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮ ಗಾಂಧೀಜಿ ಅವರು ಹಿಂಸೆಯ ಭಯವನ್ನು ಎದುರಿಸಿ ಅಹಿಂಸೆಯ ಮಾರ್ಗವನ್ನು ಹಿಡಿದರು. ಬ್ರಿಟಿಷ್ ಆಡಳಿತದ ಶಕ್ತಿ ಮತ್ತು ಬಂಧನಗಳ ಭಯವನ್ನು ಜಯಿಸಿ, ಲಕ್ಷಾಂತರ ಜನರನ್ನು ಪ್ರೇರೇಪಿಸಿದರು. ಅವರ ಧೈರ್ಯವೇ ಭಾರತದ ಸ್ವಾತಂತ್ರ್ಯ ಹೋರಾಟದ ಪ್ರಮುಖ ಶಕ್ತಿ ಆಯಿತು. ಮತ್ತೊಂದು ಉದಾಹರಣೆ ನೆಲ್ಸನ್ ಮಂಡೇಲಾ. ದಕ್ಷಿಣ ಆಫ್ರಿಕಾದಲ್ಲಿ ಅಪಾರ್ಥೈಡ್ ವ್ಯವಸ್ಥೆಯ ವಿರುದ್ಧ ಹೋರಾಡಿದ ಅವರು 27 ವರ್ಷಗಳ ಕಾಲ ಜೈಲಿನಲ್ಲಿ ಇದ್ದರೂ ಭಯಕ್ಕೆ ಶರಣಾಗಲಿಲ್ಲ. ಬಿಡುಗಡೆಯಾದ ನಂತರವೂ ಅವರು ಪ್ರತೀಕಾರದ ಭಯವಿಲ್ಲದೆ ಶಾಂತಿ ಮತ್ತು ಏಕತೆಯನ್ನು ಪ್ರೋತ್ಸಾಹಿಸಿದರು. ಅವರ ಧೈರ್ಯವು ಇಡೀ ರಾಷ್ಟ್ರವನ್ನು ಪರಿವರ್ತಿಸಿತು. ವಿಜ್ಞಾನ ಲೋಕದಲ್ಲಿಯೂ ಭಯವನ್ನು ಗೆದ್ದವರ ಕಥೆಗಳು ತುಂಬಿವೆ. ಥಾಮಸ್ ಎಡಿಸನ್ ಅನೇಕ ಬಾರಿ ವಿಫಲರಾದರೂ ಟಟಿನಾನು ಸೋಲಲಿಲ್ಲ, ನಾನು ಕೆಲಸ ಮಾಡುವುದಿಲ್ಲದ ಸಾವಿರ ವಿಧಾನಗಳನ್ನು ಕಂಡುಹಿಡಿದಿದ್ದೇನೆಟಟಿಎಂದು ಹೇಳಿದರು. ವಿಫಲತೆಯ ಭಯವನ್ನು ಜಯಿಸಿದ ಕಾರಣ ಅವರು ವಿದ್ಯುತ್ ಬಲ್ಬ್ ಅನ್ನು ಕಂಡುಹಿಡಿದರು. ಭಯವು ನಮ್ಮ ಕನಸುಗಳನ್ನು ಬಂಧಿಸುತ್ತದೆ. ಆದರೆ ಧೈರ್ಯವು ಅವನ್ನು ಮುಕ್ತಗೊಳಿಸುತ್ತದೆ. ನಾವು ಭಯವನ್ನು ಎದುರಿಸಿ ಮುಂದುವರಿದಾಗ ಮಾತ್ರ ಹೊಸ ಅವಕಾಶಗಳು ತೆರೆದುಕೊಳ್ಳುತ್ತವೆ. ಆದ್ದರಿಂದ, ಜೀವನದಲ್ಲಿ ಭಯವನ್ನು ಶತ್ರುವಾಗಿ ನೋಡದೆ, ಅದನ್ನು ಗೆಲ್ಲಬೇಕಾದ ಸವಾಲಾಗಿ ಸ್ವೀಕರಿಸಬೇಕು. ಭಯವನ್ನು ಜಯಿಸುವ ಪ್ರತಿಯೊಬ್ಬರೂ ತಮ್ಮ ಜೀವನದ ನಿಜವಾದ ವಿಜಯಿಗಳಾಗುತ್ತಾರೆ.



**- ಅಂತೋಣಿ ಮುತ್ತು ವಿ. ಶಿಕ್ಷಕರು**
**7259675543**

# ಇತಿಹಾಸದಲ್ಲಿ ಈ ದಿನ

## ಜೂನ್-30

1859: ಫ್ರೆಂಚ್ ಸಾಹಸಗಾರ ಚಾರ್ಲ್ಸ್ ಬ್ಲಾಂಡಿನ್ ಅವರು ನಯಾಗರಾ ಜಲಪಾತದ ಮೇಲಿಂದ ಹಗ್ಗದ ಮೇಲೆ ನಡೆದು ಇತಿಹಾಸ ನಿರ್ಮಿಸಿದರು.

1934: ಜರ್ಮನಿಯಲ್ಲಿ ಲಾಂಗ್ ನೈವ್ಸ್ ರಾತ್ರಿ ಎಂಬ ರಾಜಕೀಯ ಶುದ್ಧೀಕರಣ ಕಾರ್ಯಾಚರಣೆ ಆರಂಭವಾಯಿತು.

1960: ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ ಬೆಲ್ಜಿಯಂನಿಂದ ಸ್ವಾತಂತ್ರ್ಯ ಪಡೆಯಿತು.

1971: ಸೊಯುಜ್11 ಬಾಹ್ಯಾಕಾಶ ಯಾನದ ಮೂವರು ಗಗನಯಾತ್ರಿಗಳು ಭೂಮಿಗೆ ಮರಳುವ ವೇಳೆ ಮೃತಪಟ್ಟರು.

2005: ಸ್ಪೇನ್ ಸಲಿಂಗ ವಿವಾಹಕ್ಕೆ ಕಾನೂನು ಮಾನ್ಯತೆ ನೀಡಿದ ರಾಷ್ಟ್ರಗಳಲ್ಲಿ ಒಂದಾಯಿತು.

**ಜನನ**

1966: ಅಮೆರಿಕದ ಖ್ಯಾತ ಬಾಕ್ಸರ್ ಮೈಕ್ ಟೈಸನ್

1985: ಅಮೆರಿಕದ ಖ್ಯಾತ ಈಜುಪಟು ಮೈಕೆಲ್ ಫೆಲ್ಪ್ಸ್

**ನಿಧನ**

2013: ಭಾರತೀಯ ಖ್ಯಾತ ಚಲನಚಿತ್ರ ನಿರ್ದೇಶಕ ಮತ್ತು ಲೇಖಕ ಋತುಪರ್ಣೋ ಘೋಷ್

# ಪೋಲಿಯೋ ಹನಿ ಮಕ್ಕಳ ಜೀವಕ್ಕೆ ಆರೋಗ್ಯ ರಕ್ಷೆ: ಸಂಸದ ಶ್ರೇಯಸ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಎರಡು ಹನಿ ಪೋಲಿಯೋ ಲಸಿಕೆ ಮಕ್ಕಳ ಜೀವನದ ಆರೋಗ್ಯ ರಕ್ಷೆಯಾಗಿದೆ. 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ತಪ್ಪದೇ ಲಸಿಕೆ ಹಾಕಿಸುವ ಮೂಲಕ ಪೋಲಿಯೋ ಮುಕ್ತ ಭಾರತ ನಿರ್ಮಾಣ ಮಾಡುವುದು ಎಲ್ಲರ ಆದ್ಯ ಕರ್ತವ್ಯ ಎಂದು ಸಂಸದ ಶ್ರೇಯಸ್ ಪಟೇಲ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಆರೋಗ್ಯ ಇಲಾಖೆ ಹಾಗು ವಿವಿಧ ಇಲಾಖೆಗಳ ಸಹಯೋಗದಲ್ಲಿ ಹಿಮ್ಸ್‌ನ ಮಹಿಳಾ ಮತ್ತು ಮಕ್ಕಳ (ಎಂ.ಸಿ.ಹೆಚ್.) ಆಸ್ಪತ್ರೆಯಲ್ಲಿ ಭಾನುವಾರ ನಡೆದ ಪೋಲಿಯೋ ಲಸಿಕಾ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಲಸಿಕೆ ಹಾಕುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



ಪೋಲಿಯೋ ಅಭಿಯಾನ ಯಶಸ್ಸಿಗಾಗಿ ಜಿಲ್ಲೆಯಲ್ಲಿ 1744 ತಂಡಗಳನ್ನು ಮಾಡಲಾಗಿದ್ದು, ಪೋಲಿಯೋ ಲಸಿಕೆಗೆ 3488 ಆರೋಗ್ಯ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕಳೆದ ವರ್ಷ ಜಿಲ್ಲೆಯಲ್ಲಿ ಶೇ. 99 ರಷ್ಟು ಪೋಲಿಯೋ ಲಸಿಕೆಯನ್ನು ಹಾಕಿಸುವ ಮೂಲಕ ಯಶಸ್ಸು ಕಂಡಿದ್ದು, ಈ ಬಾರಿಯೂ ಶೇ. 100 ರಷ್ಟು ಪೋಲಿಯೋ ಲಸಿಕೆ ಹಾಕಿಸಬೇಕೆಂದರು.

ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಮಾತನಾಡಿ ಭಾರತವನ್ನು ಪೋಲಿಯೋ ಮುಕ್ತ ದೇಶವಾಗಿ ಘೋಷಿಸಲಾಗಿದೆ. ಆದರೆ ಇತರ ದೇಶಗಳಿಂದ ವಲಸೆ ಬರುವ ಜನರಿಂದ ಹರಡಬಹುದಾದ ಪೋಲಿಯೋ ಖಾಯಿಲೆಗೆ ಮುನ್ನೆಚ್ಚರಿಕಾ ಕ್ರಮವಾಗಿ ಪೋಲಿಯೋ ಕಾರ್ಯಕ್ರಮವನ್ನು ದೇಶದಾದ್ಯಂತ ನಡೆಸುತ್ತಿದ್ದು ಜಿಲ್ಲೆಯ ಎಲ್ಲಾ ಪೋಷಕರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಎರಡು ಹನಿ ಲಸಿಕೆ ಹಾಕಿಸಬೇಕೆಂದು ಕಿವಿಮಾತು ಹೇಳಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮಾತನಾಡಿ, ಜಿಲ್ಲಾದ್ಯಂತ 872 ಬೂತ್ ಸ್ಥಾಪಿಸಲಾಗಿದೆ, 3,584 ವ್ಯಾಕ್ಸಿನೇಟರ್‌ಗಳನ್ನು ನೇಮಕ ಮಾಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಮೂರು ದಿನ ಹಾಗು ನಗರ ಪ್ರದೇಶಗಳಲ್ಲಿ ನಾಲ್ಕು ದಿನ ಲಸಿಕಾ ಕಾರ್ಯಕ್ರಮ ನಡೆಯುವುದರಿಂದ ಪೋಷಕರು ಗಮನ ವಹಿಸಿ ಮಕ್ಕಳಿಗೆ ಲಸಿಕೆಯನ್ನು ತಪ್ಪದೇ ಹಾಕಿಸಬೇಕು ಎಂದು ತಿಳಿಸಿದರು.


ಆರೋಗ್ಯ ಸಿಬ್ಬಂದಿ ವರ್ಗದವರು ಪ್ರತಿ ಮನೆಗೆ ಭೇಟಿ ನೀಡಿ ಲಸಿಕೆ ಹಾಕುವ ಉದ್ದೇಶದಿಂದ 1744 ತಂಡಗಳನ್ನು ರಚಿಸಿ 179 ಮೇಲ್ವಿಚಾರಕರ ನೇಮಿಸಲಾಗಿದೆ. 8 ಸಂಚಾರಿ ತಂಡಗಳನ್ನು ನೇಮಕ ಮಾಡಲಾಗಿದ್ದು 187 ವಾಹನಗಳನ್ನು ಜಿಲ್ಲೆಯಾದ್ಯಂತ ಸಂಚಾರ ಮಾಡಿ ಪೋಲಿಯೋ ಲಸಿಕೆ ಹಾಕಿಸಲು ನಿಯೋಜನೆ ಮಾಡಲಾಗಿದೆ, ಈ ಬಾರಿ ಶೇ. ನೂರರಷ್ಟು ಗುರಿ ಸಾಧಿಸಲು ಶ್ರಮವಹಿಸಿ ಎಂದು ತಿಳಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲ ಅವರು ಮಾತನಾಡಿ, ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ತಪ್ಪದೆ ಲಸಿಕೆ ಹಾಕಿಸುವ ಮೂಲಕ ಮಕ್ಕಳ ಆರೋಗ್ಯವನ್ನು ಕಾಪಾಡಿ ಎಂದು ತಿಳಿಸಿದರು.

# ಹೆದ್ದಾರಿಯೆಂಬ ಹೆಬ್ಬಾವು

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ (ಭಾಗ - 5)**



ಏನಾದರಾಗಲಿ ಎಂದು ಬ್ಯಾಗಿನಿಂದ ಚಿಪ್ಸ್ ಪ್ಯಾಕೆಟ್ ಹೊರತೆಗೆದು, ನಾನಿನ್ನೂ ಇದ್ದೇನೆ ಎಂಬ ಫೀಲಿಂಗಾದರೂ ಇರಲಿ ಎಂದು ತಿನ್ನತೊಡಗಿದೆ. ಇದ್ದಕ್ಕಿದ್ದಂತೆ ಗಂವ್ ಎಂಬ ಸದ್ದಿನೊಡನೆ ಪುಟ್ಟ ಬಡಕಲು ನಾಯಿಯೊಂದು ಕಾಲ ಸಮೀಪವೇ ತನ್ನ ಚೂಪಾದ ಹಲ್ಲುಗಳನ್ನು ತೋರಿಸುತ್ತಾ ದಾರಿಗಡ್ಡ ಬರಬೇಕೇ? ಸುಮ್ಮನೇ ಕಾಲುಗಂಟೆ ನಿಂತಲ್ಲೇ ನಿಂತಿದ್ದರೆ, ನಿಂತ ನಿಲುವಿನಲ್ಲಿ ಬೊಗಳಿಬೊಗಳಿಯೇ ಸಾಯುವಂತೆ ಕಾಣುತ್ತಿತ್ತು. ಮುಗಿಯದ ಕತ್ತಲಲ್ಲಿ ಕೊನೆಯಿಲ್ಲದ ದಾರಿಯಲ್ಲಿ ಒಬ್ಬಂಟಿಯಾಗಿ ಹೀಗೇ ನಿರಂತರ ಗಾಬರಿ-ಗೊಂದಲದಲ್ಲಿ ನಡೆಯುತ್ತಿದ್ದವನಿಗೆ ಧಿಕ್ಕನೆ ಗಾಬರಿ ಬೀಳಿಸಿದ್ದು ಆ ಸದ್ದು. ಆಗಲೋ ಈಗಲೋ ಸಾಯುವಂತಿದ್ದ ಬಡಕಲು ನಾಯಿಯೊಂದು ತನಗೊಂದಕ್ಕೆ ಬಾಯಿಯಿರುವುದು ಎನ್ನುವಂತೆ ಅಗಾಧ ಶಿರಾಡಿ ಘಾಟಿಯನ್ನೇ ನುಂಗುವಂತೆ ಬೊಗಳತೊಡಗಿತು. ವರ್ಷಗಳಿಂದ ಬೊಗಳಲು ಅವಕಾಶವೇ ಸಿಕ್ಕಿರಲಿಲ್ಲವೇನೋ ಎಂಬಂತೆ ಭೂಮ್ಯಾಕಾಶಗಳನ್ನೂ ಒಂದು ಮಾಡುವಂತೆ ಹಲ್ಲನ್ನು ಕಿಸಿದುಕೊಂಡು ನನ್ನಿಂದ ಕೇವಲ ಎರಡೇ ಅಡಿ ದೂರದಲ್ಲಿ ನಿಂತು ನನಗೆ ಒಂದೂ ಹೆಜ್ಜೆ ಮುಂದಿಡದಂತೆ ತಡೆ ಹಾಕಿತ್ತು.

ಗಾಬರಿ, ದಿಗ್ಭ್ರಮೆ, ಭಯದಲ್ಲಿ ನಿಂತಿದ್ದ ನನಗೆ ಒಂದು ರೀತಿಯ ಸಮಾಧಾನ ಸಿಗಲಾರಂಭಿಸಿತು. ಈ ಗೊಂಡಾರಣ್ಯದಲ್ಲಿ ಜನರಿಗೆ ಅಡ್ಡಗಟ್ಟಿ ಬೊಗಳುವ ನಾಯಿಯಿದೆ ಅಂದರೆ ಇಲ್ಲೆಲ್ಲೋ ಮನುಷ್ಯರ ವಾಸ್ತವ್ಯವಿದೆಯೆಂದೇ ಅರ್ಥ. ಅನಿರೀಕ್ಷಿತವಾದ ನಾಯಿ ಪ್ರಹಾರಕ್ಕೆ ನಾನು ಆಘಾತಗೊಂಡರೂ ನಾಯಿಯಿದ್ದ ಮೇಲೆ ಮನುಷ್ಯರ ವಾಸ್ತವ್ಯ ಇಲ್ಲೇ ಎಲ್ಲೋ ಇರಬಹುದೆಂಬ ಆಸೆ ಇಣುಕಿತು. ಅತ್ತ ಘಾಟಿಯೂ ಅಲ್ಲ ಇತ್ತ ಘಟ್ಟವೂ ಅಲ್ಲದ ಈ ಅಂತರಾಳದಲ್ಲಿ ಅದ್ಯಾವನು ಮನೆ ಕಟ್ಟಿಕೊಂಡಿದ್ದಾನೋ ಎಂದು ಕುತೂಹಲ ಮೂಡಿತು.

ಇನ್ನೇನು ಕಚ್ಚಿಯೇಬಿಡುತ್ತದೆ ಎನ್ನುವಷ್ಟರ ಮಟ್ಟಿಗೆ ಮೈಮೇಲೆ ನೆಗೆಯುವಂತೆ ಕಾಣುತ್ತಿದ್ದ ನಾಯಿಮರಿಯ ಮುಖಕ್ಕೇ ಟಾರ್ಚ್ ಹಾಕಿ ಕಚ್ಚಿಸಿಕೊಳ್ಳದಂತೆ ಸರ್ಕಸ್ ಮಾಡಲು ಶುರು ಮಾಡಿದ್ದೆ. ನಾಲ್ಕಾರು ಚಿಪ್ಸ್‌ಗಳನ್ನು ಎಸೆದು ನೋಡಿದೆ. ಆ ನಾಯಿ ಮರಿಗೆ ನನ್ನ ಮೇಲೆ ಎಷ್ಟು ರೋಷವಿತ್ತೆಂದರೆ ಚಿಪ್ಸನ್ನು ಮೂಸಿಯೂ ನೋಡದೆ ಅದರ ಮೇಲೆಯೇ ನಿಂತು ಎಗರಿ ಎಗರಿ ಬೀಳುತ್ತಿತ್ತು. ನನಗೆ ಒಂದು ಹೆಜ್ಜೆಯನ್ನೂ ಮುಂದೆ ಎತ್ತಿಡದಂತೆ ತಡೆದಿದ್ದ ನಾಯಿಮರಿಯ ಹಿಂಭಾಗದಿಂದ ಕತ್ತಲಿನಲ್ಲಿ ಏನೋ ಕಿರ್ರ್, ಗಟಗಟ ಕ್ರೀಂಚ್ ಶಬ್ದ ಬಂದಂತಾಯ್ತು, ತಗಡಿನ ಗೇಟನ್ನು ತೆರೆದಂತೆ. ಆ ಕತ್ತಲಿನಲ್ಲಿ ಏನೂ ಕಾಣಿಸ್ತಿರಲಿಲ್ಲ. ಯಾರೋ ಕೆಮ್ಮಿ ಕ್ಯಾಕರಿಸಿದಂತಾಯ್ತು. ನಾಯಿಮರಿ ಅತ್ತಕಡೆ ಒಮ್ಮೆ ಹಿಂತಿರುಗಿ ನೋಡಿ ಇನ್ನೂ ಉತ್ತೇಜನಗೊಂಡು ಎಗರಾಡತೊಡಗಿತು. ಅಷ್ಟರಲ್ಲಿ ನನ್ನ ಎಡಭಾಗದಿಂದ ಯಾರೋ ಕೆಮ್ಮಿ ಕ್ಯಾಕರಿಸಿ ಉಗಿದ ಸದ್ದಾಗಿ ತಟ್ಟನೆ ಅತ್ತಕಡೆ ತಿರುಗಿದೆ. ಸುಮಾರು ಐದು ಅಡಿ ಎತ್ತರದ ವ್ಯಕ್ತಿಯೊಬ್ಬ ಕೈಯಲ್ಲಿ ಕ್ವಾರ್ಟರು ಬಾಟಲಿಯಿಂದ ಮಾಡಿದ ಸೀಮೆಎಣ್ಣೆ ದೀಪವನ್ಹಿಡಿದು ನನ್ನೆಡೆಗೆ ಬರತೊಡಗಿದ. ತೀರಾ ನನ್ನ ಮುಖದ ಸಮೀಪವೇ ದೀಪ ತಂದು ಮನುಷ್ಯ ಪ್ರಾಣಿ ಹೌದೋ, ಅಲ್ಲವೋ ಎಂದು ಖಚಿತ ಪಡಿಸಿಕೊಂಡ. ಅದ್ಯಾವುದೋ ನನಗರ್ಥವಾಗದ ಭಾಷೆಯಲ್ಲಿ ನನ್ನ ಪೂರ್ವಾಪರಗಳನ್ನು ವಿಚಾರಿಸತೊಡಗಿದ.

ಕೈಯಲ್ಲಿ ಕ್ವಾರ್ಟರ್ ಬಾಟಲಿಯ ಸೀಮೆಎಣ್ಣೆ ದೀಪ ಹಿಡಿದ ವ್ಯಕ್ತಿ ರೂಪದ ಆಕೃತಿಯೊಂದು ದೀಪವನ್ನು ತಲೆಯ ಪಕ್ಕಕ್ಕಿಟ್ಟುಕೊಂಡು ಕತ್ತಲಲ್ಲಿ ನನ್ನನ್ನುದ್ದೇಶಿಸಿ, ಯಾರು?ಟಿ ಎಂದಿತು. ನಾನು ಮಾತನಾಡಲಿಲ್ಲ. ಇನ್ನೂ ದೆವ್ವದ ಗುಂಗಿನಲ್ಲಿದ್ದ ನಾನು, ಆ ಆಕೃತಿ ಮೂರು ಬಾರಿ ಯಾರು?ಟಿ ಎನ್ನಲಿ ಎಂದು ಕಾಯ್ದೆ. ಎರಡನೇ ಬಾರಿ ಯಾರು ಎನ್ನುವ ದನಿ ಇನ್ನೂ ಗಡುಸಾಗಿತ್ತು. ಮೂರನೇ ಬಾರಿ ಗದರಿಸುವಂತಿತ್ತು. ಆಗ ಬಾಯ್ಬಿಟ್ಟ ನಾನು, ನನ್ನ ಮಾರನಹಳ್ಳಿ ಯಾತ್ರೆ ಬಗ್ಗೆ ತಿಳಿಸಿದೆ. ಆ ಆಕೃತಿ ನಾಯಿಯನ್ನು ಹಚಾ ಎಂದು ಕೂಡಾ ಎನ್ನದೇ ಸೀದಾ ಹಿಂದೆ ಹೋಗಿ ಅದೇ ಕಿರ್ರ್, ಗಟಗಟ ಕ್ರೀಂಚ್ ಎಂಬ ಸದ್ದಿನೊಂದಿಗೆ ಬೆಳಗಿನ ಬಾಗಿಲೊಂದನ್ನು ತೆರೆಯಿತು. ನಾಯಿ ನಿರಂತರವಾಗಿ ತನ್ನ ಬೊಗಳುವಿಕೆಯನ್ನು ಮುಂದುವರೆಸಿತ್ತು. ಅದನ್ನೊಮ್ಮೆ ಅವನದೇ ಭಾಷೆಯಲ್ಲಿ ಗದರಿಸಿದ. ಮತ್ತಾದರೂ ನಾಯಿ ತನ್ನ ಕಾಯಕ ಮುಂದುವರೆಸಿದ್ದರಿಂದ ತನ್ನ ಕೈಯಲ್ಲಿ ದೀಪವಿರುವುದನ್ನೇ ಮರೆತು ಕೈ ಬೀಸಿದ. ದೀಪ ಪಳಕ್ಕೆಂದು ಆರಿಹೋಗಿ ಇದ್ದ ಅಲ್ಪ ಸ್ವಲ್ಪ ಬೆಳಕೂ ನಂದಿಹೋಯಿತು. ತಾನು ಬಂದೆಡೆಗೆ ತಿರುಗಿ ಅದೇನೋ ನನಗೆ ತಿಳಿಯದ ಭಾಷೆಯಲ್ಲಿ ಏನೆನನ್ನೋ ಕೂಗಿ ಹೇಳಿದ. ಹೆಚ್ಚಿನಾಂಶ ಬೆಂಕಿಪೊಟ್ಟಣ ತರಲೆಂದು ಕೂಗಿದನೇನೋ, ಮತ್ತೆ ನನ್ನೆಡೆಗೆ ತಿರುಗಿ ನನ್ನ ಟಾರ್ಚ್ ಬೆಳಕಿನಲ್ಲೇ ಅವನದೇ ಆದ ಭಾಷೆಯಲ್ಲಿ ಸಂಪರ್ಕ ಸಾಧಿಸಲು ಪ್ರಯತ್ನಿಸಲಾರಂಬಿಸಿದ. ಅವನ ಹಿಂಭಾಗದ ಕತ್ತಲೆಯಿಂದ ದೀಪವೊಂದು ನಿಧಾನವಾಗಿ ನಮ್ಮೆಡೆಗೆ ಬರತೊಡಗಿತು. ಸುಮಾರು ನಲವತ್ತರ ಪ್ರಾಯದ ಹೆಣ್ಣಂಗಸು ಜೊತೆಗೆ ಹದಿನಾರು ಹದಿನೇಳರ ತರುಣಿಯೊಬ್ಬಳು ಅಚ್ಚರಿಯ ಕಣ್ಣುಗಳನ್ನು ತೆರೆದುಕೊಂಡು ನನ್ನೆಡೆಗೆ ನೋಡುತ್ತಾ ಬಂದರು. ಅಲ್ಲೇ ಎಲ್ಲೋ ಹತ್ತಿರದ ಕಾಫಿ ತೋಟಕ್ಕೆ ಕೆಲಸಕ್ಕೆ ಹೋಗುತ್ತಿದ್ದರಿಂದ ಅವರಿಬ್ಬರಿಗೆ ಅಲ್ಪ ಸ್ವಲ್ಪ ಕನ್ನಡ ಬರುತ್ತಿತ್ತು.

ಹೊರಗೆ ಬಂದ ಗಂಡಸು ಈಗ ಸ್ವಲ್ಪ ಅಧಿಕಾರವಾಣಿಯಿಂದ ನನ್ನನ್ನು ಯಾರು, ಏನು, ಎತ್ತ ಎಲ್ಲಾ ವೃತ್ತಾಂತವನ್ನು ತನ್ನ ಮಳಯಾಳಿ ಮಿಶ್ರಿತ ಕನ್ನಡದಲ್ಲಿ ಕೇಳಿ ತಿಳಿದುಕೊಂಡ. ಹಾಗೂ ಹೀಗೂ ಮಾಡಿ ನನ್ನ ಪ್ರಯಾಣವನ್ನು ಅವರಿಗೆ ತಿಳಿಸಿ ರೈಲ್ವೇಹಾದಿಯ ವಿವರ ಪಡೆದೆ. ನಂತರ, ನಿಮಗೆ ರೈಲ್ವೇ ಟ್ರ್ಯಾಕಿಗೆ ನೇರವಾಗಿ ಹೋಗಬೇಕೆಂದರೆ ಹೀಗೇ ಸುಮಾರು ಎರಡು ಕಿಲೋಮೀಟರು ರಸ್ತೆಯಲ್ಲಿಯೇ ಹೋಗಿ ಬಲಕ್ಕೆ ತಿರುಗಿ ದನ ತಿರುಗಾಡುವ ಕಾಲ್ದಾರಿಯಲ್ಲಿ ಹೋದರೆ ರೈಲ್ವೇ ಸೇತುವೆಯೊಂದು ಕಾಣುತ್ತೆ ಎಂದ. ಆ ತರುಣಿಯೂ ನಾವು ನಿಂತಲ್ಲಿಂದ ಸಕಲೇಶಪುರದೆಡೆಗೆ ಎರಡು ಕಿಲೋಮೀಟರು ನಡೆದರೆ ಬಲಭಾಗದಲ್ಲಿ ದನ ತಿರುಗಿ ಆಗಿರುವ ದಾರಿಯೊಂದಿದೆ, ಅದರಲ್ಲೇ ಮುಂದೆ ಹೋದರೆ ಈಚಲಹರ ಸಿಗುತ್ತದೆ, ಹರ ಹತ್ತಿ ಇಳಿದರೆ ರಸ್ತೆ ಎರಡು ಕವಲಾಗುತ್ತದೆ, ಬಲದಾರಿಯಲ್ಲಿ ಹೋದರೆ ಒಂದು ಹೊಳೆ ಸಿಗುತ್ತೆ, ಆ ಹೊಳೆಯ ಮೇಲೆಯೇ ರೈಲ್ವೇ ಸೇತುವೆ ಹಾದುಹೋಗಿದೆ ಎಂಬ ವಿವರಣೆಯನ್ನು ಸವಿಸ್ತಾರವಾಗಿ ಹೇಳಿದಳು. ಅವರಿಂದ ಬೀಳ್ಕೊಂಡು ನಾನು ಹೊರಡುವಷ್ಟರಲ್ಲಿ ಬೆಳಗಾಗುವ ಲಕ್ಷಣಗಳು ಪ್ರಾರಂಭವಾಗಿದ್ದವು. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248